# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 2017-18ನೇ ಸಾಲಿನಲ್ಲಿ ಜಿಲ್ಲೆಯ ವಕ್ಫ್ ಸ್ವತ್ತುಗಳ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

******

**ಓದಲಾಗಿದೆ :**
1) ಸರ್ಕಾರಿ ಆದೇಶ ಸಂಖ್ಯೆ: MWD 155 WES 2011(P) ದಿನಾಂಕ:28-04-2011
2) ಸರ್ಕಾರಿ ಆದೇಶ ಸಂಖ್ಯೆ: MWD 169 MDS 2017,ದಿನಾಂಕ: 25-04-2017
3) ಸರ್ಕಾರಿ ಆದೇಶ ಸಂಖ್ಯೆ: MWD 28 WGA 2017,ದಿನಾಂಕ: 28-08-2017
4) ಸರ್ಕಾರಿ ಆದೇಶ ಸಂಖ್ಯೆ: MWD 169 MDS 2017,ದಿನಾಂಕ: 14-09-2017, 04-11-2017 ಮತ್ತು 22-01-2018
5) ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಇವರ ಪತ್ರ ಸಂಖ್ಯೆ:KBW/PWP/GTS/02/GEN/2012-13,ದಿನಾಂಕ:20.11.2017

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ:28-04-2011 ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದ ವಕ್ಫ್ ಆಸ್ತಿಗಳಾದ ಖಬರಸ್ಥಾನ, ಈದ್ಗಾದ ಜಾಗಗಳನ್ನು ಅಕ್ರಮ ಒತ್ತುವರಿ, ಅನಧೀಕೃತ ಸ್ವಾಧೀನ ಮತ್ತು ವಿವಾದಗಳಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ತಡೆಯಲು ಆಸ್ತಿಗಳ ಸುತ್ತ ಬೇಲಿ/ಗೋಡೆಯನ್ನು ಹಾಕುವುದು ಅತ್ಯಾವಶ್ಯಕವಾಗಿರುತ್ತದೆ. ಅದನ್ನು ಸಂರಕ್ಷಣೆ ಮಾಡುವ ಯೋಜನೆಯಡಿ ಕೆಲವು ನಿಬಂಧನೆಗಳನ್ನು ರೂಪಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:25-04-2017 ರ ಸರ್ಕಾರಿ ಆದೇಶದಲ್ಲಿ ವಕ್ಫ್ ಸಂಪತ್ತಿನ ರಕ್ಷಣೆಗಾಗಿ 2017-18ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2225-03-102-0-13(059) (ಯೋಜನೆ) ರಡಿಯಲ್ಲಿ ಸರ್ಕಾರವು ರೂ.2000.00ಲಕ್ಷಗಳ ಅನುದಾನವನ್ನು ನಿಗಧಿಪಡಿಸಿ ಮೊದಲನೇ ಕಂತಿನ ಅನುದಾನ ಒಟ್ಟು ರೂ.500.00ಲಕ್ಷ ಮಂಜೂರು ಮಾಡಲಾಗಿದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದ 29 ಜಿಲ್ಲೆಗಳಲ್ಲಿರುವ 602 ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಿಸಲು ಒಟ್ಟು ರೂ.34,58,00000/-ಅನುದಾನ ಬಿಡುಗಡೆ ಮಾಡಲಾಗಿದೆ.

ಮೇಲೆ (4) ರಲ್ಲಿ ಓದಲಾದ ದಿನಾಂಕ:25-04-2017 ರ ಸರ್ಕಾರಿ ಆದೇಶದಲ್ಲಿ ವಕ್ಫ್ ಸಂಪತ್ತಿನ ರಕ್ಷಣೆಗಾಗಿ 2017-18ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2225-03-102-0-13(059) (ಯೋಜನೆ) ರಡಿಯಲ್ಲಿ ಸರ್ಕಾರವು ರೂ.2000.00ಲಕ್ಷಗಳ ಅನುದಾನವನ್ನು ನಿಗಧಿಪಡಿಸಿ ಎರಡನೇ, ಮೂರನೇ ಹಾಗೂ ನಾಲ್ಕನೇ ಕಂತಿನ ಅನುದಾನ ಒಟ್ಟು ರೂ.1500.00ಲಕ್ಷ ಮಂಜೂರು ಮಾಡಲಾಗಿದೆ.

ಮೇಲೆ (5)ರಲ್ಲಿ ಓದಲಾದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಪ್ರಸ್ತಾವನೆಗಳನ್ನು ಪಡೆಯಲಾಗಿದ್ದು, ಇವುಗಳನ್ನು ಪರಿಶೀಲಿಸಿ ರಾಜ್ಯದ ಒಟ್ಟು 30 ಜಿಲ್ಲೆಗಳ 651 ವಕ್ಫ್ ಸ್ವತ್ತುಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಕೆಳಕಂಡಂತೆ ಆದೇಶಿಸಿದೆ.

.........2